ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.**

**ಸಂಖ್ಯೆ:ಆರ್‌ಎಸ್‌ಆರ್/ಎಕ್ಸ್‌ಎಂಸಿ/ಸ್ಪಷ್ಟೀಕರಣ/190/2014-15** **ದಿನಾಂಕ:12-01-2015**

**ಸ್ಪಷ್ಟೀಕರಣ**

ವಿಷಯ: ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆಯಲ್ಲಿ ಅರ್ಹ ಮತದಾರರಾಗಲು ಕನಿಷ್ಠ ವ್ಯವಹಾರ ನಡೆಸುವ ಕುರಿತು.

ಉಲ್ಲೇಖ: ಸಚಿವಾಲಯದ ಪತ್ರ ಸಂ:ಸಿಒ 263 ಸಿಎಲ್‌ಎಂ 2014 ದಿನಾಂಕ:08-1-2015.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕ್ಕೆ ತಿದ್ದುಪಡಿ ತಂದು ದಿನಾಂಕ:11-2-2013 ರಂದು ಜಾರಿಗೊಳಿಸಲಾಗಿರುತ್ತದೆ. ಈ ತಿದ್ದುಪಡಿಯು ಸಂವಿಧಾನದ ಆಶಯ ರೀತ್ಯಾ ಸದಸ್ಯರು ಸಹಕಾರ ಸಂಘಗಳ ವ್ಯವಸ್ಥಾಪನೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಆಯಾ ಸಹಕಾರ ಸಂಘದ ಉಪನಿಯಮದಲ್ಲಿ ನಿಗದಿಪಡಿಸಿದ ಕನಿಷ್ಠ ಸೇವಾ ಸೌಲಭ್ಯಗಳನ್ನು ಪಡೆಯಬೇಕೆಂಬ ನಿಬಂಧನೆ ಇರುತ್ತದೆ. ಇದನ್ನು ಪೂರ್ವಾನ್ವಯವಾಗಿ ಕನಿಷ್ಠ ವ್ಯವಹಾರವನ್ನು ಪರಿಗಣಿಸುವುದು ಬೇಕೇ ಎಂಬ ಜಿಜ್ಞಾಸೆ ಹಲವು ಸಹಕಾರ ಸಂಘಗಳಲ್ಲಿ ಉಂಟಾಗಿದೆ.

ಈ ಸಂಬಂಧ ಸಹಕಾರ ಸಚಿವಾಲಯವು ಉಲ್ಲೇಖದ ಪತ್ರದಲ್ಲಿ ಸ್ಪಷ್ಟೀಕರಣ ನೀಡಿರುತ್ತದೆ. ಸಹಕಾರ ಸಂಘಗಳು ಆಡಳಿತ ಮಂಡಳಿ ಮತದಾರರ ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಸಹಕಾರ ಕಾಯ್ದೆಗೆ ತಿದ್ದುಪಡಿ ಅನುಸಾರವಾಗಿ ಕನಿಷ್ಠ ವ್ಯವಹಾರ/ಸೌಲಭ್ಯ ಷರತ್ತು ದಿನಾಂಕ:11-2-2013 ರಿಂದ ಮೂರು

ಸಹಕಾರ ವರ್ಷಗಳ ನಂತರ ಜಾರಿಯಾಗತಕ್ಕದ್ದೆಂದು ಎಲ್ಲಾ ಸಹಕಾರ ಸಂಘಗಳಿಗೆ ಈ ಮೂಲಕ ಸ್ಪಷ್ಟೀಕರಣ ನೀಡಲಾಗಿದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)

ಗೆ,

1. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು
3. ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
4. ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು.
5. ಇಲಾಖಾ ಜಾಲತಾಣಕ್ಕೆ

<u>ಪ್ರತಿಯನ್ನು:</u> ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ.